ಅಭಿಯಾಚನೆ ಕ್ರಮಾಂಕ ; ೨೬

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚಿ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೭,೨೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೩,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಧಾರವಾಡ ನಗರದಲ್ಲಿನ ಕೊಳಚೆ ಪ್ರದೇಶಗಳ ಬಗ್ಗೆ

೪೦೮ (೨೨೧) ಶ್ರೀ ಎಸ್. ಆರ್. ಪೋರೆ (ಧಾರವಾಡ).—ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಧಾರವಾಡ ನಗರದಲ್ಲಿ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ?

ಆ) ತೇಜಸ್ವಿ ನಗರ ಮತ್ತು ಮೃತ್ಯುಂಜಯ ನಗರದ ನಡಾಫ್ ಗಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಇ) ಕೊಳಚೆ ನಿರ್ಮೂಲನಕ್ಕೆ ಕ್ರಮ ಜರುಗಿಸಲು ಸರ್ಕಾರದವರಿಗೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು).—

ಅ) ೧೭.

ಆ) ತೇಜಸ್ವಿ ಹೌಸಿಂಗ್ ಸೊಸೈಟಿ ಪಕ್ಕದಲ್ಲಿರುವ ಲಕ್ಕಮನಹಳ್ಳಿ ಕೊಳಚೆ ಪ್ರದೇಶವನ್ನು ೧೯೮೩-೮೪ ರಲ್ಲಿ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.

ಮೃತ್ಯುಂಜಯ ನಗರದ ನಡಾಫ ಗಲ್ಲಿಯನ್ನು ಕೊಳಚೆ ಪ್ರದೇಶವೆಂದು ಘೋಷಿಸಿರುವುದಿಲ್ಲ ವಾದ್ದರಿಂದ ಈ ಪ್ರದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ತ್ವರಿತವಾಗಿ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ: ೪೧೯ (೨೨೧)

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದಂಥ ಉತ್ತರ ಬಂದಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮೇಲಿನ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಸರ್ಕಾರಿ ಮರಗಳನ್ನು ಕಡಿಯುತ್ತಿರುವುದು

೪೦೧ (೧೭೩) ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿಯಲ್ಲಿ ಸರ್ಕಾರಿ ಮರಗಳನ್ನು ಕಡಿದಿರುವ ಬಗ್ಗೆ ೧೯೭೮ನೇ ಸಾಲಿನಿಂದ ಈ ತಹಲ್‌ಪರೆವಿಗೂ ತಹಸೀಲ್ದಾರರಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು. ಆ ಪೈಕಿ ಎಷ್ಟು ಅರ್ಜಿಗಳನ್ನು ತಹಸೀಲ್ದಾರರು ಮುಂದಿನ ನಡವಳಿಕೆಗಾಗಿ ಪೋಲೀಸ್ ಇಲಾಖೆಗೆ ರವಾನಿಸಿದ್ದಾರೆ?

ಅ) ಈ ಪ್ರಕರಣಗಳಲ್ಲಿ ಪಾಲ್ಗೊಂಡಿದ್ದ ಅಪರಾಧಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳ ಹೆಸರುಗಳೇನು ?

ಇ) ಈ ಬಗ್ಗೆ ಪೋಲೀಸ್ ಇಲಾಖೆಯಿಂದ ಎಷ್ಟು ಪ್ರಕರಣಗಳಲ್ಲಿ ಅಪಾದನೆ ಪಟ್ಟಿಗಳನ್ನು ನ್ಯಾಯಾಲಯದಲ್ಲಿ ಹಾಕಲಾಗಿದೆ ?

ಈ) ಈ ರೀತಿ ಕಡಿದಿರುವ ಮರಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಪೈಕಿ ಅಪಾನತ್ತು ಮಾಡಿರುವ ಮರಗಳ ಸಂಖ್ಯೆ ಎಷ್ಟು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಚಿಕ್ಕೋಡಿ ಪಟ್ಟಣದ ನೀರಿನ ವ್ಯವಸ್ಥೆಯ ಬಗ್ಗೆ

೪೧೧ (೨೨೨) ಶ್ರೀ ಎ. ಎ. ನಿಂಬಾಲ್ಕರ್.—ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಚಿಕ್ಕೋಡಿ ಪಟ್ಟಣಕ್ಕೆ ಈಗ ಹಾಲಿ ಇರುವ ನೀರು ಸರಬರಾಜು ಸಾಕಷ್ಟು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡ ಕ್ರಮ ಗಳಾವುವು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಬಂದಿದೆ.

ಆ) ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ೧೦ ಲಕ್ಷ ರೂ. ಗಳ ಯೋಜನೆಯು ಮಂಜೂರಾಗಿದೆ ಮತ್ತು ಯೋಜನೆಯ ಕೆಲಸಗಳು ಪ್ರಗತಿಯಲ್ಲಿವೆ.

SRI A. A. NIMBALKAR.—Sir, Will the Hon'ble Minister give details of the scheme and the progress achieved so far ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ನಾವು ಒಟ್ಟು ೧೦ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದೆವು. ಆದರೆ ಆದರಲ್ಲಿ ಸುಮಾರು ೮.೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಪ್ರಶ್ನೆಸಂಖ್ಯೆ ೪೧೨ (೨೦೬)

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆ ನನಗೆ ಸಂಬಂಧ ಪಟ್ಟಿದ್ದು ಅಲ್ಲ ವಾದ್ದರಿಂದ ಇದನ್ನು ಕ್ಯಾರಿ ಓವರ್ ಮಾಡಿದರೆ ಒಳ್ಳೆಯದು.

ಉಪಾಧ್ಯಕ್ಷರು.—ಅದನ್ನು ಕ್ಯಾರಿ ಓವರ್ ಮಾಡಲಾಗಿದೆ.